**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 786 |
| ಮಾನ್ಯ ಸದಸ್ಯರ ಹೆಸರು: | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 21.08.2026 |
| ಉತ್ತರಿಸುವ ಸಚಿವರು: | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

***

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಪ್ರಸ್ತುತ ಸರ್ಕಾರಿ, ಸ್ಥಳೀಯ ಸಂಸ್ಥೆ, ಖಾಸಗಿ, ಸ್ವಯಂಸೇವಾ ಸಂಸ್ಥೆಗಳು ಹಾಗೂ ಹೊರರಾಜ್ಯಗಳಲ್ಲಿ ನೋಂದಾಯಿಸಿಕೊಂಡು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಂಬುಲೆನ್ಸ್ ಗಳ ಒಟ್ಟು ಸಂಖ್ಯೆ ಎಷ್ಟು:<br>ಇತರೆ ವಿಶೇಷ ಆಂಬುಲೆನ್ಸ್‌ಗಳ ವಿವರಗಳೇನು:</td><td>ರಾಜ್ಯದಲ್ಲಿ ಪ್ರಸ್ತುತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಅಡಿಯಲ್ಲಿ ಈ ಕೆಳಕಂಡ ಆಂಬ್ಯುಲೆನ್ಸ್ ಗಳು ಕಾರ್ಯ ನಿರ್ವಹಿಸುತ್ತಿವೆ.
<table>
<tr><th>ಕ್ರ.ಸಂ</th><th>ಕಾರ್ಯಕ್ರಮ</th><th>ಮಾದರಿ</th><th>ಸಂಖ್ಯೆ</th><th>ಒಟ್ಟು ಸಂಖ್ಯೆ</th></tr>
<tr><td rowspan="2">1</td><td rowspan="2">ರಾಜ್ಯ ವಲಯದ ಆಂಬುಲೆನ್ಸ್</td><td>Advanced Life Support Ambulances (ALS)</td><td>112</td><td rowspan="2">932</td></tr>
<tr><td>Basic Life Support Ambulances (BLS)</td><td>820</td></tr>
<tr><td>2</td><td>ನಗು ಮಗು</td><td>ಅನ್ವಯಿಸುವುದಿಲ್ಲ</td><td>169</td><td>169</td></tr>
<tr><td rowspan="2">3</td><td rowspan="2">108 ಆರೋಗ್ಯ ಕವಚ</td><td>Advanced Life Support Ambulances (ALS)</td><td>289</td><td rowspan="2">715</td></tr>
<tr><td>Basic Life Support Ambulances (BLS)</td><td>426</td></tr>
</table>
</td></tr>
<tr><td>ಆ)</td><td>ವಿವಿಧ ಆಂಬುಲೆನ್ಸ್ ಗಳಿಗೆ ವಾಹನದ ಬಣ್ಣ, ಹೊರಭಾಗದ ಗುರುತು ಮತ್ತು ವಿನ್ಯಾಸ, ಪ್ರತಿಫಲಕ ಪಟ್ಟಿಗಳು ಸೈರನ್ ಮತ್ತು ಎಮರ್ಜೆನ್ಸಿ ಲೈಟ್‌ಗಳು, GPS, CCTV, ಆಮ್ಲಜನಕ ವ್ಯವಸ್ಥೆ, ವೆಂಟಿಲೇಟರ್, ಡಿಫಿಬ್ರಿಲೇಟರ್, (Defibrillator) ಮಾನಿಟರ್, ಸ್ಟ್ರೆಚರ್, ಔಷಧಿ ಹಾಗೂ ತುರ್ತು ಚಿಕಿತ್ಸಾ ಕಿಟ್‌ಗಳು ಸೇರಿದಂತೆ ಸರ್ಕಾರ ನಿಗಧಿಪಡಿಸಿದ ಮಾನದಂಡಗಳಾವುವು: ಅವು ಅನುಷ್ಠಾನದಲ್ಲಿದೆಯೇ:</td><td>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ರಾಜ್ಯ ವಲಯದ ಹಾಗೂ 108 ಆರೋಗ್ಯ ಕವಚ ಆಂಬ್ಯುಲೆನ್ಸ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಂಬ್ಯುಲೆನ್ಸ್‌ಗಳಲ್ಲಿ ಕೇಂದ್ರ ಸರ್ಕಾರದಿಂದ ನಿಗಧಿಪಡಿಸಿರುವ National Ambulance Services (NAS) ಮಾನದಂಡಗಳನ್ವಯ ವಾಹನದ ಬಣ್ಣ, ಹೊರಭಾಗದ ಗುರುತು ಮತ್ತು ವಿನ್ಯಾಸ. ಪ್ರತಿಫಲಕ ಪಟ್ಟಿಗಳು ಸೈರನ್ ಮತ್ತು ಎಮರ್ಜೆನ್ಸಿ ಲೈಟ್‌ಗಳು, GPS, CCTV, ಆಮ್ಲಜನಕ ವ್ಯವಸ್ಥೆ, ವೆಂಟಿಲೇಟರ್, ಡಿಫಿಬ್ರಿಲೇಟರ್, (Defibrillator) ಮಾನಿಟರ್, ಸ್ಟ್ರೆಚರ್, ಔಷಧಿ ಹಾಗೂ ತುರ್ತು ಚಿಕಿತ್ಸಾ ಕಿಟ್‌ಗಳನ್ನು ಬಳಸಲಾಗುತ್ತಿದೆ.</td></tr>
<tr><td>ಇ)</td><td>ಪ್ರತಿ ಆಂಬುಲೆನ್ಸ್‌ಗಳಲ್ಲಿ ಇರುವ ಸಿಬ್ಬಂದಿಯೆಷ್ಟು ಹಾಗೂ ಯಾರ್ಯಾರು ಅವರ ಕೆಲಸದ ಅವಧಿಯೆಷ್ಟು: ಎಷ್ಟು (ಶಿಫ್ಟ್) ಪಾಳಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ: ಸೂಕ್ತ ತರಬೇತಿ ನೀಡಲಾಗಿದೆಯೇ: ಆಂಬ್ಯುಲೆನ್ಸ್ ವಾಹನದ ನಿಗದಿತ ಒಟ್ಟು ಸೇವಾ ಅವಧಿಯಲ್ಲಿ (life span) ಗರಿಷ್ಠ ಎಷ್ಟು ಕಿಲೋಮೀಟರ್ ಗಳವರೆಗೆ ಸಂಚರಿಸಬಹುದಾಗಿದೆ: ವಾಹನದ ಫಿಟ್ನೆಸ್, ವಿಮೆ ಇತರ ಸುರಕ್ಷತೆ ಹಾಗೂ ಉಪಕರಣಗಳ Calibration ಹಾಗೂ ನಿರ್ವಹಣೆಯ</td><td>ರಾಜ್ಯ ವಲಯದ ಆಂಬ್ಯುಲೆನ್ಸ್‌ಗಳಲ್ಲಿ ವಾಹನ ಚಾಲಕರ ಲಭ್ಯತೆಯ ಮೇರೆಗೆ ಎರಡು (2) ಪಾಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ 108 ಆರೋಗ್ಯ ಕವಚ ಕಾರ್ಯಕ್ರಮದಡಿ ಆಂಬ್ಯುಲೆನ್ಸ್‌ಗಳಲ್ಲಿ (3) ಪಾಳಿಗಳಲ್ಲಿ, ಪ್ರತಿ ಪಾಳಿಯಲ್ಲಿ ಒಬ್ಬರು Emergency Medical Technician (EMT) ಮತ್ತು ಒಬ್ಬರು ವಾಹನ ಚಾಲಕ (Pilot) ಕಾರ್ಯನಿರ್ವಹಿಸುತ್ತಿದ್ದಾರೆ.<br><br>ವಾಹನವು 4.00 ಲಕ್ಷ ಕಿಲೋಮೀಟರ್ ಅಥವಾ 07 ವರ್ಷ ಗಳು ಪೂರ್ಣಗೊಳಿಸಿರುವ (ಯಾವುದು ಮೊದಲು) ಅದನ್ನು ಪರಿಗಣಿಸಿ ವಾಹನವನ್ನು ನಿರುಪಯುಕ್ತಗೊಳಿಸಲಾಗುವುದು.<br><br>ರಾಜ್ಯ ವಲಯದ ಆಂಬ್ಯುಲೆನ್ಸ್ ವಾಹನಗಳ ಫಿಟ್ನೆಸ್, ವಿಮೆ</td></tr>
</table>

| | | |
|---|---|---|
| | ನಿಯಮಗಳೇನು: | ಇತರ ಸುರಕ್ಷತೆ ಹಾಗೂ ಉಪಕರಣಗಳ Calibration ಹಾಗೂ ನಿರ್ವಹಣೆಯನ್ನು ಸಂಬಂಧಪಟ್ಟ ಆರೋಗ್ಯ ಸಂಸ್ಥೆಯವರು ಕಾಲಕಾಲಕ್ಕೆ ನಿಯಮಾನುಸಾರ ನಿರ್ವಹಿಸಲಾಗುತ್ತಿದೆ.<br><br>108 ಆರೋಗ್ಯ ಕವಚ ಕಾರ್ಯಕ್ರಮದಲ್ಲಿ EMRI GHS ಸಂಸ್ಥೆಯ ಮೂಲಕ ಸೇವೆ ಸಲ್ಲಿಸುತ್ತಿರುವ ತುರ್ತು ವೈದ್ಯಕೀಯ ತಂತ್ರಜ್ಞರಿಗೆ (Emergency Medical Technicians) ತುರ್ತು ವೈದ್ಯಕೀಯ ತಂತ್ರಜ್ಞರ ತರಬೇತಿಗಳನ್ನು 108 ಆರೋಗ್ಯ ಕವಚ ಕಾರ್ಯಕ್ರಮದಲ್ಲಿ EMRI GHS ಸಂಸ್ಥೆಯ ಮೂಲಕ ಸೇವೆ ಸಲ್ಲಿಸುತ್ತಿರುವ ತುರ್ತು ವೈದ್ಯಕೀಯ ತಂತ್ರಜ್ಞರಿಗೆ (Emergency Medical Technicians) ತುರ್ತು ವೈದ್ಯಕೀಯ ತಂತ್ರಜ್ಞರ ತರಬೇತಿಗಳನ್ನು ನೀಡಲಾಗುತ್ತದೆ. |
| ಈ) | ರಾಜ್ಯಾದ್ಯಂತ ಏಕರೂಪ ಬಣ್ಣ-ಕೋಡಿಂಗ್ ಉಪಕರಣಗಳ ಮಾನದಂಡ, ಸಿಬ್ಬಂದಿ ಅರ್ಹತೆ GPS ಆಧಾರಿತ ಮೇಲ್ವಿಚಾರಣೆ, ಪ್ರತಿಕ್ರಿಯೆ ಸಮಯ (Response Time) ದರ ನಿಯಂತ್ರಣ ಹಾಗೂ 24x7 ದೂರು ವ್ಯವಸ್ಥೆ ಒಳಗೊಂಡಂತೆ ಸಮಗ್ರ ಆಂಬ್ಯುಲೆನ್ಸ್ ನಿರ್ವಹಣಾ ನೀತಿಯನ್ನು ಸರ್ಕಾರ ಯಾವ ಕಾಲಮಿತಿಯಲ್ಲಿ ಜಾರಿಗೊಳಿಸಲಿದೆ? | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರವು, ರಾಷ್ಟ್ರೀಯ ಆಂಬ್ಯುಲೆನ್ಸ್ ಸೇವೆ (NAS) 2026 – ಕಾರ್ಯಾಚರಣಾ ಮಾರ್ಗಸೂಚಿಗಳನ್ನು ಪ್ರಕಟಿಸಲಾಗಿರುತ್ತದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮಾರ್ಗಸೂಚಿಗಳ ಪ್ರಕಾರ ತುರ್ತು ಆಂಬ್ಯುಲೆನ್ಸ್ ಸೇವೆಗಳನ್ನು ಭಾರತ ಸರ್ಕಾರವು, ರಾಷ್ಟ್ರೀಯ ಆಂಬ್ಯುಲೆನ್ಸ್ ಸೇವೆ (NAS) 2026 – ಕಾರ್ಯಾಚರಣಾ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸ ಲಾಗುವುದು.<br><br>"ಸಮಗ್ರ ಆಂಬ್ಯುಲೆನ್ಸ್ ನಿರ್ವಹಣಾ ನೀತಿ" ಗೆ ಸಂಬಂಧಿಸಿದ ನಿರ್ಧಾರಗಳನ್ನು ಸಂಬಂಧಿತ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಅಗತ್ಯವಿದ್ದಲ್ಲಿ ಜಾರಿಗೊಳಿಸಲಾಗುವುದು. |

(ಯು.ಟಿ. ಖಾದರ್ ಫರೀದ್)
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಆಕುಕ 101 ಎಸ್‌ಬಿವಿ 2026